ಕಥೆ

# ಯುಗದ ಕೊಂಡಿ



**ಡಾ. ಮಿರ್ಜಾ ಬಷೀರ್**

ಕಲೆ: ವಿ.ಎಂ. ಮಂಜುನಾಥ್

**ಸುಖಕ್ಕಾಗಿ ಕಾತರಿಸುವ**
**ಕೋಟ್ಯಂತರ ಜನಕ್ಕೆ**
**ಹಣ ನೆಲ ಹೊನ್ನು ಬೇಕು!**
**ಕೆಲವರಿಗೆ ಪ್ರೀತಿ;**
**ಎಲ್ಲೋ ಕೆಲವರಿಗೆ ಕುಗ್ರಾಮದ**
**ಹಿತ್ತಿಲೊಂದರ ಹೂವು**
**ಬಡಜೋಗಿಯ ಹಾಡು**

**-ನೀಲು**

ಎಂಬತ್ತು ವರ್ಷಕ್ಕೂ ಮೇಲ್ಪಟ್ಟು ವಯಸ್ಸಾಗಿರುವ ಹಿರಿಯಜ್ಜನ ಮನೆಯಲ್ಲಿ ನಾಲ್ಕು ತಲೆಮಾರಿನ ಜನರಿದ್ದಾರೆ. ಅವನು ತನ್ನ ಮರಿಮೊಮ್ಮಗಳು ಬಾಲೆಯನ್ನು ಈಗಲೂ ಬೆಳಗ್ಗೆ ಶಾಲೆಯ ತನಕ ಹೋಗಿ ಬಿಟ್ಟು ಬರುತ್ತಾನೆ ಮತ್ತು ಸಾಯಂಕಾಲ ಕರೆದುಕೊಂಡು ಬರುತ್ತಾನೆ. ಬೇಡವೆಂದರೂ ಕೇಳುವುದಿಲ್ಲ. ಇಷ್ಟು ವಯಸ್ಸಾಗಿದ್ದರೂ ಕುಂದದ ತನ್ನ ನಡೆದಾಡುವ ಶಕ್ತಿಯ ಬಗ್ಗೆ ಅವನಿಗೆ ಅಭಿಮಾನ. ಇದುವರೆಗೆ ನಡೆಯುವಾಗ ಒಮ್ಮೆಯೂ ಜೋಲಿ ಹೊಡೆದಿಲ್ಲ ಎಂದು ಜೋಲಿ ಹೊಡೆದಂತೆ ನಟಿಸಿ ತಮಾಷೆ ಮಾಡುತ್ತಾನೆ. ಇನ್ನೂ ಹತ್ತು ವರ್ಷ ಸುಲಭವಾಗಿ ನಡೆದಾಡಿಕೊಂಡಿರುತ್ತೇನೆ ಎಂದು ಮನೆ ಮಂದಿಗೆ, ಸ್ನೇಹಿತರಿಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಪ್ರಾಥಮಿಕ ಶಾಲಾ ಉಪಾಧ್ಯಾಯನಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತನಾಗಿ ಈಗಾಗಲೇ ಮೂವತ್ತು ವರ್ಷದ ಮೇಲಾಗಿದೆ.

ಮನೆಯಲ್ಲಿರುವ ಕಿರಿಯಜ್ಜನು ಹಿರಿಯಜ್ಜನ ಒಬ್ಬನೇ ಮಗ. ಕಿರಿಯಜ್ಜನೂ ಸರ್ಕಾರಿ ಸೇವೆಯಲ್ಲಿದ್ದು ನಿವೃತ್ತನಾಗಿದ್ದಾನೆ. ಕಿರಿಯಜ್ಜನ ಕಿರಿ ಮಗನೇ ಈಗ ಅಮೆರಿಕದಿಂದ ಆರು ವರ್ಷಗಳ ನಂತರ ಮನೆಮಂದಿಯನ್ನೆಲ್ಲ ನೋಡಲು ನಾಲ್ಕಾರು ದಿನಗಳ ಮಟ್ಟಿಗೆ ಮನೆಗೆ ಬರುವುದಾಗಿ ತಿಳಿಸಿರುವುದು. ಈ ಸುದ್ದಿ ಮನೆಯಲ್ಲಿ ಸಂಚಲನವುಂಟು ಮಾಡಿದೆ. ಇಷ್ಟು ಕಾಲದ ಮೇಲಾದರೂ ನೆನಪಾದೆವಲ್ಲ ಎಂದು ಮನೆಯವರೆಲ್ಲಾ ರೋಮಾಂಚಿತರಾದರು. ಕಿರಿಯಜ್ಜನಿಗೆ ಈ ಸುದ್ದಿಯಿಂದಲೇ ಕೈ ಕಾಲುಗಳಲ್ಲಿ ಹೊಸ ಶಕ್ತಿ ಹರಿದಾಡಿದಂತಾಯಿತು. ತನ್ನ ಹೆಂಡತಿ ಜೊತೆ ಮಗನ ಬರುವಿಗಾಗಿ ಕಾತರಿಸಿ ಕಾಯತೊಡಗಿದನು. ಗಂಡ ಹೆಂಡತಿ ಇಬ್ಬರ ಮೈಯ್ಯ ಎಲ್ಲ ಕೀಲುಗಳಿಗೆ ಗ್ರೀಸು ಹಚ್ಚಿದಂತಾಗಿ ಕೀಲು ಕುದುರೆಗಳಂತೆ ಓಡಾಡತೊಡಗಿದರು.

ಕಿರಿಯಜ್ಜನ ಹಿರಿಯ ಮಗ ಅದೇ ಊರಿನ ಪದವಿ ಕಾಲೇಜಿನಲ್ಲಿ ಇಂಗ್ಲಿಷ್ ಲೆಕ್ಚರರ್ ಆಗಿದ್ದ. ಅವನೂ ಸಹ ಏನಾದರೂ ಮಾಡಿ ಅಮೆರಿಕಕ್ಕೆ ಹಾರುವ ಕನಸು ಕಾಣುತ್ತಿದ್ದ. ಯಾವುದಾದರೂ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುವ ಅವಕಾಶವಿದೆಯೇ ಎಂದು ಅಮೆರಿಕದ ಅನೇಕ ವಿಶ್ವವಿದ್ಯಾಲಯಗಳ ಬಗ್ಗೆ ವಿವರವಾಗಿ ಓದಿ ತಿಳಿದುಕೊಂಡಿದ್ದ. ಹಗಲು ರಾತ್ರಿ ಅಂತರ್ಜಾಲವನ್ನು ಜಾಲಾಡುವುದೇ ಅವನ ಉದ್ಯೋಗವಾಗಿತ್ತು. ತಮ್ಮನು ಬಂದಾಗ ಅವನಿಂದ